# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 330
ಸದಸ್ಯರ ಹೆಸರು : ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 12.07.2018
ಉತ್ತರಿಸುವ ಸಚಿವರು : ಮುಖ್ಯಮಂತ್ರಿಗಳು

*****

| ಪ್ರಶ್ನೆ | | ಉತ್ತರ | |
|---|---|---|---|
| ಅ) | ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನ ಅರೆಕ್ಯಾತನಹಳ್ಳಿಯಿಂದ ಕನ್ನಮೇಡಿಯವರೆಗೆ ಹಾದು ಹೋಗಿರುವ 220 ಕೆ.ವಿ. ಲೈನ್‌ನಿಂದ ನಷ್ಟ ಅನುಭವಿಸಿರುವ ರೈತರಿಗೆ ಪರಿಹಾರ ಕೊಟ್ಟಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ; | ಅ) ಮತ್ತು ಆ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ನಿರ್ಮಿಸಲಾಗುತ್ತಿರುವ 220 ಕೆವಿ ಮಧುಗಿರಿ–ಪಾವಗಡ ಪ್ರಸರಣ ಮಾರ್ಗವು 220 ಕೆವಿ ಮಧುಗಿರಿ ವಿದ್ಯುತ್ ಉಪಕೇಂದ್ರದಿಂದ ಹೊಸದಾಗಿ ನಿರ್ಮಿಸಲಾಗುತ್ತಿರುವ 220 ಕೆವಿ ಪಾವಗಡ (ಅರೆಕ್ಯಾತನಹಳ್ಳಿ) ವಿದ್ಯುತ್ ಉಪಕೇಂದ್ರದವರೆಗೆ ಕನ್ನಮೇಡಿ ಮುಖಾಂತರ ಹಾದು ಹೋಗುತ್ತಿರುತ್ತದೆ.<br><br>ಅರೆಕ್ಯಾತನಹಳ್ಳಿಯಿಂದ ಕನ್ನಮೇಡಿಯವರೆಗೆ ಹಾದುಹೋಗಿರುವ 220 ಕೆ.ವಿ ಪ್ರಸರಣ ಮಾರ್ಗದ ಕಾರಿಡಾರಿನಲ್ಲಿ ಬರುವ 136 ಸಂಖ್ಯೆಯ ಫಲಾನುಭವಿಗಳಿಗೆ ವಿತರಿಸಬೇಕಾದ ಒಟ್ಟು ಪರಿಹಾರ ಮೊತ್ತ ರೂ.274 ಲಕ್ಷಗಳಾಗಿದ್ದು, ಈ ಪೈಕಿ 79 ಸಂಖ್ಯೆಯ ಫಲಾನುಭವಿಗಳಿಗೆ ಈಗಾಗಲೇ ರೂ. 167 ಲಕ್ಷಗಳಷ್ಟು ಪರಿಹಾರ ಮೊತ್ತವನ್ನು ವಿತರಿಸಲಾಗಿರುತ್ತದೆ.<br><br>ಇನ್ನುಳಿದ 57 ಸಂಖ್ಯೆಯ ಫಲಾನುಭವಿಗಳಿಗೆ ರೂ. 107 ಲಕ್ಷಗಳಷ್ಟು ಪರಿಹಾರ ಮೊತ್ತ ವಿತರಣೆಗಾಗಿ ಫಲಾನುಭವಿಗಳಿಂದ ದಾಖಲಾತಿ ಸಂಗ್ರಹಣೆ ಕಾರ್ಯ ಪ್ರಗತಿಯಲ್ಲಿದ್ದು, ಜಮೀನಿನ ಮಾಲೀಕತ್ವಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಇಲಾಖೆಗೆ ಸಲ್ಲಿಸಿದ ನಂತರ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಆ) | ಬಂದಿದ್ದಲ್ಲಿ, ಈ ಪರಿಹಾರ ನೀಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು) | | |
| ಇ) | 220 ಕೆ.ವಿ. ಲೈನ್ ಕೆಳಗೆ ಹಲವಾರು ಗ್ರಾಮಗಳ ರೈತರ ತೋಟ, ಹೊಲ, ಗದ್ದೆಗಳಿಗೆ ಹಾನಿಯಾಗಿರುವ ಜೊತೆಗೆ ಅರೆಕ್ಯಾತನಹಳ್ಳಿಯಿಂದ ವೆಂಕಟಾಪುರ ಸ್ಟೇಷನ್‌ಗೆ ಹಾದುಹೋಗಿರುವ 120 ಕೆ.ವಿ. ಲೈನ್‌ಗೆ ಸಂಬಂಧಿಸಿದಂತೆ ಪರಿಹಾರ ಧನ ವಿತರಿಸಿಲ್ಲದಿರಲು ಕಾರಣವೇನು ; (ವಿವರ ನೀಡುವುದು) | ಇ) ಮತ್ತು ಈ) | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ 220 ಕೆವಿ ಪಾವಗಡ (ಅರೆಕ್ಯಾತನಹಳ್ಳಿ) ವಿದ್ಯುತ್ ಉಪಕೇಂದ್ರದಿಂದ 66 ಕೆ.ವಿ ವೆಂಕಟಾಪುರ ವಿದ್ಯುತ್ ಉಪಕೇಂದ್ರದವರೆಗೆ 66 ಕೆ.ವಿ. ಬಹುಮುಖ (Multi circuit line) ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಮಾಡಲಾಗುತ್ತಿರುತ್ತದೆ.<br><br>ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಸಮಯದಲ್ಲಿ ಪ್ರತಿ ಗೋಪುರ ನಿರ್ಮಾಣ ಮಾಡುವಾಗ ಗೋಪುರಕ್ಕೆ ನಿಗದಿಪಡಿಸಲಾದ ಒಟ್ಟು ಪರಿಹಾರ ಮೊತ್ತದಲ್ಲಿ ಶೇ 50 ರಷ್ಟನ್ನು ಸ್ಲಬ್ ಕಾಂಕ್ರೀಟ್ ಕಾಮಗಾರಿ ನಂತರ ಮತ್ತು ಉಳಿದ ಶೇ 50 ರಷ್ಟು ಮೊತ್ತವನ್ನು ಗೋಪುರ ನಿರ್ಮಾಣದ ಬಳಿಕ ಫಲಾನುಭವಿಗಳಿಗೆ ಪಾವತಿ ಮಾಡಲಾಗುವುದು. ಹಾಗೆಯೇ ವಿದ್ಯುತ್ ಪ್ರಸರಣ ಮಾರ್ಗ ನಿರ್ಮಾಣ ಸಮಯದಲ್ಲಿ ಹಾನಿಗೊಳಗಾಗುವ ಜಮೀನಿಗೆ, ತೆರವುಗೊಳಿಸಲಾದ ಗಿಡ/ಮರ/ಬೆಳೆಗಳಿಗೆ ಪರಿಹಾರವನ್ನು ತಂತಿ ಎಳೆದ ನಂತರ ಫಲಾನುಭವಿಗಳಿಗೆ ಪಾವತಿ ಮಾಡಲಾಗುವುದು. |
| ಈ) | ಈ ಪರಿಹಾರ ಧನವನ್ನು ಎಷ್ಟು ದಿನಗಳೊಳಗಾಗಿ ವಿತರಣೆ ಮಾಡಲಾಗುವುದು ? ಸ್ಪಷ್ಟ ಉತ್ತರ ನೀಡುವುದು) | | |

| | | | |
|---|---|---|---|
| | | | ಸದರಿ 66 ಕೆ.ವಿ ಪ್ರಸರಣ ಮಾರ್ಗದಡಿಯಲ್ಲಿ ಬರುವ ಫಲಾನುಭವಿಗಳಿಗೆ ಪರಿಹಾರ ವಿತರಣೆ ಮಾಡಲು 66 ಕೆ.ವಿ ಮಾರ್ಗ ನಿರ್ಮಾಣ ಸಮಯದಲ್ಲಿ ಹಾನಿಗೊಳಗಾಗುವ ಜಮೀನನ್ನು ಗುರುತು ಮಾಡಲು ಸಂಬಂಧಪಟ್ಟ ತಾಲ್ಲೂಕು ಸರ್ವೇಯರ್‌ಗಳಿಂದ ಜಮೀನಿನ ಅಳತೆ ಮಾಡಿಸಲಾಗಿದ್ದು, ಫಲಾನುಭವಿಗಳಿಂದ ದಾಖಲಾತಿ ಸಂಗ್ರಹಣೆ ಕಾರ್ಯ ಪ್ರಗತಿಯಲ್ಲಿದ್ದು, ಜಮೀನಿನ ಮಾಲೀಕತ್ವಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಇಲಾಖೆಗೆ ಸಲ್ಲಿಸಿದ ನಂತರ ಪಾವತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಇಎನ್ 119 ಇಬಿಎಸ್ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ